ಈ) ಇಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಲ್ಪೆ ಸಮುದ್ರ ತಂಗುದಾಣದ ಕೆಲಸದ ಬಗ್ಗೆ

೧೫೪. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಾಂಸ್ಕೃತಿಕ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಲ್ಪೆ ಸಮುದ್ರ ತಂಗುದಾಣದ ಕೆಲಸವು ೧೯೭೯ರಲ್ಲಿ ಪ್ರಾರಂಭವಾಗಿದ್ದು, ಇದುವರೆವಿಗೂ ಪೂರ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಯೋಜನೆಗೆ ಒಟ್ಟು ಅಂದಾಜು ವೆಚ್ಚವೆಷ್ಟು? ಆದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಷ್ಟು ಹಣ ಖರ್ಚು ಮಾಡಿದೆ?

ಇ) ಈ ಯೋಜನೆಯನ್ನು ಮುಂಗಿಸಲು ಆಗದಿರಲು ಕಾರಣಗಳೇನು?

ಈ) ಈ ತಂಗುದಾಣವನ್ನು ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಗುತ್ತಿಗೆ ಆಧಾರದ ಮೇಲೆ ಕೊಡಲು ಅಥವಾ ಈ ಸಂಸ್ಥೆಗೆ ಮಾರಾಟ ಮಾಡಲು ಸರ್ಕಾರವು ಇಚ್ಛಿಸಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಾಂಸ್ಕೃತಿಕ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಮಲ್ಪೆ ಸಮುದ್ರ ತಂಗುದಾಣದ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಹೊಸ ಯೋಜನೆಯನ್ನೊಳಗೊಂಡ ಪರಿಷ್ಕೃತ ಅಂದಾಜು ವೆಚ್ಚ ೧೧೩.೮೦ ಲಕ್ಷ ರೂ. ಇದುವರೆವಿಗೂ ಕೇಂದ್ರ ಸರ್ಕಾರವು ೪೧.೭೮ ಲಕ್ಷ ರೂ. ಮತ್ತು ರಾಜ್ಯ ಸರ್ಕಾರವು ೩೦.೫೩ ಲಕ್ಷ ರೂ. ಖರ್ಚು ಮಾಡಿದೆ.

ಇ) ಈ ಕೆಳಕಂಡ ಕಾರಣಗಳಿಂದಾಗಿ ಈ ಯೋಜನೆಯನ್ನು ಪೂರೈಸಲು ನಿಧಾನವಾಗುತ್ತಿದೆ.—

೧) ಈ ಯೋಜನೆಯ ನಕಾಶೆ ಮತ್ತು ಅಂದಾಜು ಪತ್ರಿಕೆಯನ್ನು ಪುನಃ ಪುನಃ ಪರಿಷ್ಕಾರಮಾಡುತ್ತಿದ್ದುದರಿಂದ, ಮತ್ತು

೨) ಹಣದ ಕೊರತೆ.

ಈ) ಮಲ್ಪೆ ತಂಗುದಾಣವನ್ನು ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ಮಾರಲು ಉದ್ದೇಶಿಸಿತ್ತು. ಆದರೆ ಆ ಸಂಸ್ಥೆಯು ಕೊಂಡು ಕೊಳ್ಳಲು ಸಾಧ್ಯವಿಲ್ಲದಿರುವುದು ಅವರ ಇತ್ತೀಚಿನ ಪತ್ರದಿಂದ ಕಂಡುಬಂದಿದೆ.

ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಬಗ್ಗೆ

೧೫೫. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಗ್ರಾಮೀಣಾ ಅಭಿವೃದ್ಧಿ, ಪಂಚಾಯತ್‌ರಾಜ್ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಸಂಖ್ಯೆ ಇಲ್ಲಿಯವರೆಗೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ರಾಜ್ಯದಲ್ಲಿರುವ ಒಟ್ಟು ಕೊಳವೆ ಬಾವಿಗಳ ಸಂಖ್ಯೆ

ಇ) ಕೇಂದ್ರ ಸರ್ಕಾರವು ಬಿಡುಗಡೆ ಮಾಡಲಾದ ಹಣ ಮತ್ತು ರಾಜ್ಯ ಸರ್ಕಾರವು ಈ ಯೋಜನೆಗಳ ಮೇಲೆ ಖರ್ಚು ಮಾಡಿದ ವೆಚ್ಚ.